ದಿನಾಂಕ 03 ನೇ ಏಪ್ರಿಲ್ 2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು : ಎದುರುದಾರರ ಪರ ಶ್ರೀ ಕೆ. ಪಿ. ಬಿ ವಕೀಲರಿಂದಃ-

9. ನನ್ನ ಜನ್ಮ ದಿನಾಂಕ 13.04.1982 ಆಗಿರುತ್ತದೆ. ನನ್ನ ಮದುವೆ ಸಮಯದಲ್ಲಿ ನನ್ನ ವಯಸ್ಸು ಮರೆಮಾಚಿ ಒಂದನೇ ಎದುರುದಾರರ ಜೊತೆ ಮದುವೆ ಆಗಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ನನಗೆ ನನ್ನ ಮನೆಯಿಂದ ವರದಕ್ಷಿಣೆ ಹಾಗೂ ಚಿನ್ನಾಭರಣವನ್ನು ತೆಗೆದುಕೊಂಡು ಬಾ ಎಂದು ಹೇಳಿರುತ್ತಾರೆ. ನಾನು ಯಾವುದೇ ವರದಕ್ಷಿಣೆ ಹಾಗೂ ಚಿನ್ನಾಭರಣವನ್ನು ತೆಗೆದುಕೊಂಡು ಬಂದಿರುವುದಿಲ್ಲ. ಯಾವಾಗ ಈ ವಿಚಾರ ನನಗೆ ಎದುರುದಾರರು ಹೇಳಿರುತ್ತಾರೆ ಎಂದು ನನಗೆ ನೆನಪಿಲ್ಲ. ಏಪ್ರಿಲ್ 2024 ರಲ್ಲಿ ನನ್ನ ವಸ್ತುಗಳನ್ನು ಒಂದನೇ ಎದರುದಾರರು ಮನೆಯ ಹೊರಡಗೆ ಎಸೆದಿರುತ್ತಾರೆ. ಯಾವ ವಸ್ತುಗಳೆಂದರೆ ಸಾಕ್ಷಿಯು ನನಗೆ ಮದುವೆಯಲ್ಲಿ ಬಂದ ಉಡುಗೊರೆಗಳನ್ನು ಹೊರಚೆಲ್ಲಿರುತ್ತಾರೆ. ನನಗೆ ಬಂದ ಉಡುಗೊರೆ ವಸ್ತುಗಳಲ್ಲಿ ಗಾಜಿನ ವಸ್ತುಗಳು ಇತ್ತು. ಒಡೆದುಹೋಗಬಾರದ ವಸ್ತುಗಳನ್ನು ಮನೆಯ ಹೊರಗಡೆ ಎಸೆದಿರುತ್ತಾರೆ.

10. ಎದುರುದಾರರು ನನಗೆ ವರದಕ್ಷಿಣೆ ಹಾಗೂ ಚಿನ್ನಾಭರಣವನ್ನು ತೆಗೆದುಕೊಂಡು ಬಾ ಎಂದು ಕಿರುಕುಳ ನೀಡಿಲ್ಲ ಎಂದರೆ ಸಾಕ್ಷಿಯು ಆಸ್ತಿಯನ್ನು ಬರೆಸಿಕೊಂಡು ಬಾ ಮತ್ತು ಹಣವನ್ನು ತೆಗೆದುಕೊಂಡು ಬಾ ಎಂದು ಕಿರುಕುಳ ನೀಡುತ್ತಿದ್ದರು ಎನ್ನುತ್ತಾರೆ. ಎದುರುದಾರರು ಯಾವುದೇ ವಸ್ತುಗಳನ್ನು ಮನೆಯ ಹೊರಗಡೆ ಎಸೆದಿಲ್ಲ ಎಂದರೆ ಸರಿಯಲ್ಲ. ನನಗೆ ಏನಾದರೂ ತೊಂದರೆ ಬಂದರೆ ನಾನು ಜ್ಯೋತಿಷ್ಯ ರವರ ಬಳಿ ಹೋಗವ ಅಭ್ಯಾಸ ಇದಿಯಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನನ್ನ ಜೀವನ ನಿರ್ವಹಣೆಗೆ ಬೇಕಾದ ಹಣವನ್ನು ಸಂಪಾದಿಸುವ ಅರ್ಹತೆ ಇರುವುದರಿಂದ ಒಂದನೇ ಪ್ರತಿವಾದಿ ಕಡೆಯಿಂದ ಜೀವನಾಂಶ ಕೇಳಲು ಅರ್ಹಳಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಮುಕ್ತಾಯ.

ಮರು ವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.